ಬೊನ್ನಾಳ ಪಕ್ಷಿಧಾಮ ನಿರ್ಮಾಣಕ್ಕಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಮೊದಲನೇ ಹಂತವಾಗಿ ಕೇಂದ್ರ ಸರ್ಕಾರದಿಂದ ರೂ. 36.55 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಆ) ಕ್ರಮ ಕೈಗೊಂಡಿದ್ದಲ್ಲಿ ಯಾವ ಹಂತದಲ್ಲಿದೆ;

ಸದರಿ ಕೆರೆಯು ಪ್ರಸ್ತುತ ನೀರಾವರಿ ಇಲಾಖೆಯ (ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ) ಸುಪರ್ದಿಯಲ್ಲಿದ್ದು, ಕೆರೆಯನ್ನು ಪಕ್ಷಿಧಾಮವಾಗಿ ಘೋಷಿಸಲು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತವನ್ನು ಕೋರಲಾಗಿದೆ.

ಇ) ಕಾಮಗಾರಿ ಎಂದಿನಿಂದ ಪ್ರಾರಂಭಿಸಲಾಗುವುದು?

ಉಪ ಅರಣ್ಯ ಸಂರಕ್ಷಣಾಧಿಕಾರಿ, ಗುಲ್ಬರ್ಗ ಇವರು ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಕೈಗೊಂಡು ಈಗಾಗಲೇ ರೂ. 28.275 ಲಕ್ಷಗಳಷ್ಟು ಕಾಮಗಾರಿಗಳನ್ನು ನಿರ್ವಹಿಸಿರುತ್ತಾರೆ.

ಕರ್ನಾಟಕ ವಿಧಾನಸಭೆ

224 ಡಾ॥ ಬಗಲಿ ಸಾರ್ವಭೌಮ ಸಶಗೌಡ(ಇಂಡಿ)

ಆನಂದ ವಸಂತ ಅಸ್ನೋಟಿಕರ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ) ಇಂಡಿ ಮತ ಕ್ಷೇತ್ರದಲ್ಲಿ ಕಳೆದ ವರ್ಷ ಎಷ್ಟು ಕೆರೆಗಳಲ್ಲಿ ಎಷ್ಟೆಷ್ಟು ಮೀನಿನ ಮರಿಗಳನ್ನು ಬಿಡಲಾಯಿತು ಇದಕ್ಕೆ ತಗಲಿದ ವೆಚ್ಚ ಎಷ್ಟು;

ಇಂಡಿ ಮತಕ್ಷೇತ್ರದಲ್ಲಿ ಕಳೆದ ವರ್ಷ ಏಳು ಕೆರೆಗಳಲ್ಲಿ ಒಟ್ಟು 6.01 ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿದೆ. ಇದಕ್ಕೆ ತಗುಲಿದ ವೆಚ್ಚ ರೂ.2.60 ಲಕ್ಷ ವಿವರಗಳು ಈ ಕೆಳಕಂಡಂತಿದೆ:–

ಕ್ರ.ಸಂ.	ಕೆರೆಗಳ ಹೆಸರು	ಕೆರೆಯಲ್ಲಿ ಬಿಡಲಾದ ಮೀನುಮರಿಗಳ ಸಂಖ್ಯೆ (ಲಕ್ಷಗಳಲ್ಲಿ)
1	ಜೆಗಜಿವಣಿಕೆರೆ	1.55
2	ಅರ್ಜಿನಾಳಕೆರೆ	0.50
3	ಅಂಬಾಳಕೆರೆ	0.20
4	ರಾಜನಾಳಕೆರೆ	0.45
5	ಸಂಗೋಗಿಕೆರೆ	1.83
6	ಲೋಣಿಕೆರೆ	1.07
7	ಕೋಟನಾಳಕೆರೆ	0.41
	ಒಟ್ಟು	**6.01**

ಆ) ಈ ಬಿತ್ತನೆಯಿಂದ ಎಷ್ಟು ಉತ್ಪಾದನೆ ಆಗಿದೆ; ಉತ್ಪಾದನೆಯಾದ ಮೀನುಗಳ ತೂಕ ಎಷ್ಟು;

ಈ ಬಿತ್ತನೆಯಿಂದ 73 ಟನ್ ಮೀನು ಉತ್ಪಾದನೆಯಾಗಿದೆ.

ಇ) ಮೀನು ಉತ್ಪಾದನೆ ಹೆಚ್ಚಿಸಲು ಯಾವ ಸಂಶೋಧನೆ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಈ ಬಗ್ಗೆ ಯಾವುದೇ ಹೊಸ ಸಂಶೋಧನೆ ಕೈಗೊಂಡಿರುವುದಿಲ್ಲ. ಆದರೆ, ಈ ಮೊದಲೇ ಸಂಶೋಧನೆಯಿಂದ ದೃಢೀಕರಿಸಿರುವ ಸಮಿಶ್ರ ತಳಿ ಮೀನು ಕೃಷಿ ಬಗ್ಗೆ ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಮೀನು ಕೃಷಿಕರಿಗೆ ಮೀನು ಉತ್ಪಾದನೆ ಹೆಚ್ಚಿಸಲು ತಾಂತ್ರಿಕ ಸಲಹೆ ನೀಡುತ್ತಿದ್ದಾರೆ.

ಕರ್ನಾಟಕ ವಿಧಾನ ಸಭೆ

226 ಶ್ರೀ ಸುಭಾಷ.ಆರ್.ಗುತ್ತೇದಾರ್

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಸರ್ಕಾರಿ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ಹಾಗೂ ವೃಂದಾವಾರು ವಿವರಗಳನ್ನು ನೀಡುವುದು);

ಇಲಾಖೆಗಳು	ದಿನಗೂಲಿ ನೌಕರರ ಒಟ್ಟು ಸಂಖ್ಯೆ	ವೃಂದವಾರು	
		ಸಿ–ಗ್ರೂಪ್	ಡಿ–ಗ್ರೂಪ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಆಳಂದ	130	78	52
ಸಾಮಾಜಿಕ ಅರಣ್ಯ ಇಲಾಖೆ	14	–	14
ಸಮಾಜ ಕಲ್ಯಾಣ ಇಲಾಖೆ	04	02	02
ರೇಷ್ಮೆ ಇಲಾಖೆ	07	01	06
ಒಟ್ಟು	**155**	**81**	**74**

ಆ) ಈ ದಿನಗೂಲಿ ನೌಕರರು ಕಳೆದ ಎಷ್ಟು ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ; (ಇಲಾಖಾವಾರು ಹಾಗೂ ವೃಂದವಾರು ವಿವರಗಳನ್ನು ನೀಡುವುದು);

ಈ ದಿನಗೂಲಿ ನೌಕರರು ದಿನಾಂಕ: 01–07–1984ರ ನಂತರ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.